**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 166/2018**

**ಚಾ.ಸಾ - 6**

**ಪ್ರಾ.ಸಾ- 5**

**ಸಾಕ್ಷಿಗೆ ದಿನಾಂಕ 16-10-2024ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಲ್ಲಿಕಾರ್ಜುನ |
| ತಂದೆಯ ಹೆಸರು | ಃ | ಶರಣಪ್ಪ ಮೇತ್ರಿ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಎ.ಎಸ್.ಐ. ಶಹಾಬಾದ್ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಶಹಾಬಾದ್ |

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು 2011 ರಿಂದ 2017ರವರೆಗೆ ನಾನು ಜೇವರ್ಗಿಯ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10-12-2014 ರಂದು ಬೆಳಿಗ್ಗೆ 4.00 ಗಂಟೆ ಸಮಯದಲ್ಲಿ ಚಾಸಾ-8 SS ಹುಲ್ಲೂರು CPI ರವರು ನನಗೆ ಮತ್ತು ಚಾಸಾ-5 ಶರಣರಾಜ್, ಚಾಸಾ-7 ತುಕಾರಾಮರವರಿಗೆ ಠಾಣೆಗೆ ಕರೆಯಿಸಿ ನಮಗೆ ತಿಳಿಸಿದ್ದೇನೆಂದರೆ ತಹಸಿಲ್ದಾರ ಕಾರ್ಯಲಾಯದ ಆಹಾರ ನಿರೀಕ್ಷಕರಾದ ದೌಲತರಾಯರವರು ನನಗೆ ಹೇಳಿದ್ದೇನೆಂದರೆ ಎಪಿ-23 ವ್ಯೆ-2259 ಲಾರಿಯಲ್ಲಿ ಸರಕಾರದ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಅಂತಾ ಹೇಳಿರುತ್ತಾರೆ. ಅದಕ್ಕೆ ನಾನು, ಚಾಸಾ-4 ನಜೀರ್, ಚಾಸಾ-1 ದೌಲತರಾಯ, ಚಾಸಾ-8 SS ಹುಲ್ಲೂರ, ಚಾಸಾ-8 ತುಕಾರಾಮರವರು ರದ್ದೆವಾಡಗಿ ಕ್ರಾಸಿಗೆ ಬೆಳಗಿನ ಜಾವ 04-30 ಕ್ಕೆ ತಲುಪಿರುತ್ತೇವೆ. ಆಗ ಸದರಿ ಸ್ಥಳದಲ್ಲಿ ವಾಹನಗಳನ್ನು ಪರಿಶೀಲನೆ ಮಾಡುತ್ತಾ ನಿಂತಿದ್ದೆವು. ಆಗ ಜೇವರ್ಗಿ ಕಡೆಯಿಂದ ಒಂದು ಲಾರಿ ಬಂದಿದ್ದು ಅದನ್ನು ನಾವೆಲ್ಲರೂ ನಿಲ್ಲಿಸಿದ್ದು ಅದರ ನೊಂದಣಿ ನಂ.ಎಪಿ-23 ವ್ಯೆ-2259 ಆಗಿತ್ತು. ಆಗ ಚಾಸಾ-1ರವರು ಲಾರಿ ಚಾಲಕನಿಗೆ ಲಾರಿಯಲ್ಲಿ ಏನಿದೆ ಎಂದು ಕೇಳಿರುತ್ತಾರೆ. ಆಗ ಸದರಿ ಲಾರಿ ಚಾಲಕ ತಾನು ಲಾರಿಯಲ್ಲಿ ಜೇವರ್ಗಿಯ APMC ಗಂಜ್ ನಿಂದ ಅಕ್ಕಿ ತುಂಬಿಕೊಂಡು ಗುಜರಾತ್ ಗೆ ಸರಬರಾಜು ಮಾಡಲು ಹೋಗುತ್ತಿದ್ದೇನೆ ಅಂತಾ ತಿಳಿಸಿರುತ್ತಾನೆ. ಆಗ ಚಾಸಾ-1 ರವರು ಲಾರಿ ಚಾಲಕನಿಗೆ ಸದರಿ

ಅಕ್ಕಿಯನ್ನು ಸಾಗಾಟ ಮಾಡಲು ನಿನ್ನ ಬಳಿ ಏನು ದಾಖಲೆ ಇದೆ ಅಂತಾ ಕೇಳಿದಾಗ ಆತ ತನ್ನ ಬಳಿ ಯಾವುದೇ ದಾಖಲಾತಿ ಇಲ್ಲ ಎಂದು ತಿಳಿಸಿರುತ್ತಾನೆ. ಆಗ ನಾವೆಲ್ಲರೂ ಸದರಿ ಲಾರಿಯಲ್ಲಿ ತುಂಬಿದ ಚೀಲಗಳನ್ನು ನೋಡಲಾಗಿ ಅವು 259 ಪಡಿತರ ಅಕ್ಕಿ ಚೀಲಗಳಿದ್ದವು. ಪ್ರತಿಯೊಂದು ಚೀಲ 40 ರಿಂದ 50 ಕೆ.ಜಿ. ತೂಕವುಳ್ಳದ್ದಾಗಿತ್ತು. ಸದರಿ ಚೀಲಗಳಲ್ಲಿ ಕೆಲವೊಂದು ಪ್ಲಾಸ್ಟಿಕ್ ಹಾಗೂ ಗೋಣಿ ಚೀಲಗಳು ಇದ್ದವು. ಸದರಿ ಲಾರಿ ಚಾಲಕನ ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ಮಹ್ಮದ ಸಾದಿಕ್ ತಂದೆ ಮಹ್ಮದ ಇಬ್ರಾಹಿಂ ಸಾಃ ಜಹಿರಾಬಾದ್ ಅಂತಾ ತಿಳಿಸಿರುತ್ತಾನೆ. ಆ ನಂತರ ನಾವೆಲ್ಲರೂ ಠಾಣೆಗೆ ಬಂದಿದ್ದು ಈ ವಿಚಾರವಾಗಿ ಚಾಸಾ-10 ಮಹ್ಮದ ನಿಸಾರುದ್ದೀನ್ ರವರಿಗೆ ಹೇಳಿಕೆ ನೀಡಿರುತ್ತೇನೆ.

ಲಾರಿ ಮತ್ತು ಅದರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-2 ರಿಂದ 5ರಲ್ಲಿ ಕಾಣುವ ಲಾರಿಯನ್ನು ನೋಡಿ ಗುರುತಿಸಿದ್ದು, ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ.ವಿ.ಹೆಚ್. ವಕೀಲರಿಂದಃ</u>**

ನಾವು ಆ ದಿನ ರದ್ದೆವಾಡಗಿ ಕ್ರಾಸ್ ಹತ್ತಿರ ದಾಳಿಗಾಗಿ ಹೋಗಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಲಾರಿಯನ್ನು ತಡೆ ಹಿಡಿದಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕ ಲಾರಿಯಲ್ಲಿ ಯಾವುದೇ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಲಾರಿಯಲ್ಲಿ ಅದರ ಚಾಲಕ ಯಾವುದೇ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮಹೇಬೂಬ ಪಟೇಲ ಡೀಲರ್ ಆಗಿದ್ದಾರೆಂದರೆ ಸರಿಯಲ್ಲ. ನಾವು, ಚಾಸಾ-1 ಹಾಗೂ ನಮ್ಮ ಮೇಲಾಧಿಕಾರಿಗಳು ಸೇರಿ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ